ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆ ಪ್ರಕಾರ ಔಷಧಿ ವಿತರಕರಿಗೆ ಎರಡು ವರ್ಷದ ತರಬೇತಿಯನ್ನು ನೀಡುವುದು ಅವಶ್ಯಕವಲ್ಲವೇ?

ಊ) ಹಾಗಿದ್ದಲ್ಲಿ ಮೇಲ್ಕಂಡ ತರಬೇತಿ ಕೋರ್ಸಿನ ಅವಧಿಯನ್ನು ಹೆಚ್ಚಿಸಿ ಈಗ ತರಬೇತಿಗಾಗಿ ಕರೆದಿರುವ ಅರ್ಜಿ ಆಹ್ವಾನವನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯು ಈಗ 10 ತಿಂಗಳುಗಳಾಗಿದ್ದು, ಸರ್ಕಾರವು ನಿರ್ದಿಷ್ಟ ಪಡಿಸಿದ ಅವಧಿಯಂತೆ ತರಬೇತಿ ನೀಡಲಾಗುತ್ತಿದೆ.

ಇ) ಇಲ್ಲ.

ಈ) ನಿಜವಲ್ಲ.

ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆಯ ಅಲೋಪತಿ ವೈದ್ಯ ಪದ್ಧತಿಗೆ ಮಾತ್ರ ಅನ್ವಯಿಸುತ್ತದೆಯೇ ವಿನಃ ಆಯುರ್ವೇದ ಔಷಧಿ ವಿತರಕರ ತರಬೇತಿಗೆ ಅನ್ವಯಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಸಾಲರೂಪದ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ನೀಡುವ ಕುರಿತು

315 - ಶ್ರೀ ಪಿ. ಬಸವರಾಜು (ಬ್ರಹ್ಮವರ್) : ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣಕ್ಕೆ ಈ ಹಿಂದೆ ನೀಡುತ್ತಿದ್ದ ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವನ್ನು ಪ್ರಸ್ತುತ ಸ್ಥಗಿತಗೊಳಿಸಿರುವುದು ನಿಜವೇ? ನಿಜವಾದಲ್ಲಿ ಆದಕ್ಕೆ ಕಾರಣವೇನು? (ವಿವರ ನೀಡುವುದು)

ಆ) ವಿದ್ಯಾರ್ಥಿ ವೇತನಕ್ಕೆ ಈ ಹಿಂದೆ ರಾಜ್ಯ ಸರ್ಕಾರ ಎಷ್ಟು ಪಾಲು ಹಣವನ್ನು ಕೇಂದ್ರದೊಂದಿಗೆ ಭರಿಸುತ್ತಿತ್ತು? (ವಿವರ ನೀಡುವುದು)

ಇ) ವಿದ್ಯಾರ್ಥಿ ವೇತನವು ಸ್ಥಗಿತಗೊಂಡಿರುವುದರಿಂದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಆದ್ದರಿಂದ ಪುನಃ ಇಂತಹ ವಿದ್ಯಾರ್ಥಿ ವೇತನಗಳನ್ನು ಅರ್ಹರಿಗೆ ನೀಡಲು ಪ್ರಾರಂಭಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) :

ಅ)- ಹೌದು- ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು 1991-92ನೇ ಸಾಲಿನಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಈ ಈ ಬಗ್ಗೆ ಹೆಚ್ಚಿನ ಮಾಹಿತಿ ರಾಜ್ಯಕ್ಕೆ ಬಂದಿರುವುದಿಲ್ಲ.

ಆ) ಇದು ಶೇಕಡಾ 100ರಷ್ಟು ಕೇಂದ್ರ ಸರ್ಕಾರದ ಯೋಜನೆ. ಇದಕ್ಕೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿರುವುದು ರಾಜ್ಯ ಸರ್ಕಾರದ ಪಾಲಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ತಿಳಿದಿದೆ.

ಈ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರಘಟಕಗಳಲ್ಲಿ ಸಿಬ್ಬಂದಿ ಭರ್ತಿಯ ಬಗ್ಗೆ

317 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಘಟಕಗಳು ಯಾವ ಯಾವ ಸ್ಥಳದಲ್ಲಿ ಇರುವುದು.*

ಆ) *ಅವುಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಮಂಜೂರಾದ ಸಿಬ್ಬಂದಿ ಮತ್ತು ವೈದ್ಯರ ಕೊರತೆ ಇರುವುದು ಹಾಗೂ ಅವಕ್ಕೆ ಕಾರಣಗಳೇನು? (ಎಲ್ಲಾ ಘಟಕಗಳ: ಕೇಂದ್ರಗಳ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಮತ್ತು ಈಗಿರುವ ಕೊರತೆಯ ವಿವರ ನೀಡುವುದು.*

ಇ) *ಸಾರ್ವಜನಿಕರಿಗೆ ಅವಶ್ಯವಾಗಿ ದೊರೆಯಬೇಕಾದ ಆರೋಗ್ಯ ಇಲಾಖೆಯ ಸೇವೆಯು ಪೂರ್ಣ ಪ್ರಮಾಣದಲ್ಲಿ ದೊರೆಯುವಂತಾಗಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳು: ಕೋಟ, ಬ್ರಹ್ಮಾವರ, ವೇತ್ರಿ, ಅವರ್ಸೆ, ಬಾರ್ಕೂರು, ಕೊಕ್ಕರ್ಣೆ, ಕೊಳಲಗಿರಿ, ಸಾಲಿಗ್ರಾಮ, ಸ್ಯಾಬರಕಟ್ಟೆ, ಕುಕ್ಕೆಹಳ್ಳಿ, ಸಾಸ್ತಾನ, ಪೆರ್ಡೂರು.

ಸಂಚಾರಿ ಆರೋಗ್ಯ ಘಟಕ:

ಶಿರೂರು (ಆರ್.ಡಿ.)

ಆ) ವಿವರಗಳನ್ನುಳ್ಳ ಪಟ್ಟಿ ಲಗತ್ತಿಸಲಾಗಿದೆ.

ಇ) ಕೈಗೊಳ್ಳಲಾಗುವುದು.